ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. :15/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ರಾಧಾ ಎಸ್ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಶ್ರೀನಿವಾಸ್ | **29.01.2024** |
| ವಯಸ್ಸು | : | 48 ವರ್ಷ | |
| ವೃತ್ತಿ | : | ಸಹಾಯ ನಿರ್ದೇಶಕರು ,<br>ಆರ್.ಎಫ್.ಎಸ್.ಎಲ್, ಮೈಸೂರು | ಪಿ.ಡಬ್ಲೂಃ 8 |
| ವಾಸಸ್ಥಳ | : | ಮೈಸೂರು | ಸಿ.ಡಬ್ಲೂಃ 13 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

2011 ನವೆಂಬರ್ ನಿಂದ ಇಲ್ಲಿಯವರೆಗೂ ಮೈಸೂರಿನ ಆರ್.ಎಫ್.ಎಸ್.ಎಲ್ ನಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 30.07.2020 ರಂದು ನಮ್ಮ ಕಚೇರಿಗೆ ಕವಲಂದೆ ಪೊಲೀಸ್ ಠಾಣೆಯ ಮೊ. ಸಂಖ್ಯೆ 78/2020 ರಲ್ಲಿಯ 5 ಸೀಲಾದ ವಸ್ತುಗಳನ್ನು ವಿಶ್ಲೇಷಣೆಗಾಗಿ ತಂದದ್ದನ್ನು ನಮ್ಮ ಸ್ವಾಗತ ವಿಭಾಗದವರು ಸ್ವೀಕರಿಸಿ ಅವುಗಳಿಗೆ ಕಚೇರಿ ಸಂಖ್ಯೆ ನೀಡಿ ನಮ್ಮ ಜೀವ ಶಾಸ್ತ್ರ ವಿಭಾಗಕ್ಕೆ ಕಳುಹಿಸಿ ಕೊಟ್ಟಿದ್ದರು.

3. ಆ ವಸ್ತುಗಳನ್ನು ಪಡೆದುಕೊಂಡು ಪರಿಶೀಲಿಸಲಾಗಿ ಸೀಲಗಳು ಸುಸ್ಥಿಯಲ್ಲಿದ್ದವು ಮೇಲಿನ ವಿವರಗಳು ಮಾಲುಪಟ್ಟಿ ಹಾಗೂ ಮಾದರಿ ಸೀಲನೊಂದಿಗೆ ಹೊಲಿಕೆಯಾಗುತ್ತಿದ್ದವು.

4. ವಸ್ತು ಸಂಖ್ಯೆ 1 ರಲ್ಲಿ ರಕ್ತ ಮಿಶ್ರಿತ ಮಣ್ಣು, ವಸ್ತು ಸಂಖ್ಯೆ 2 ರಲ್ಲಿ ಮಾದರಿ ಮಣ್ಣು, ವಸ್ತು ಸಂಖ್ಯೆ 3 ರಲ್ಲಿ ಒಂದು ಮಚ್ಚು, ವಸ್ತು ಸಂಖ್ಯೆ 4 ರಲ್ಲಿ ಒಂದು ಸ್ವೆಟರ್, ವಸ್ತು ಸಂಖ್ಯ 5 ರಲ್ಲಿ ಮಾದರಿ ರಕ್ತ ಇತ್ತು.

5. ಆ ಎಲ್ಲಾ ವಸ್ತುಗಳನ್ನು ರಾಸಾಯನಿಕ ಹಾಗೂ ಸಿರಾಲಾಜಿಕಲ್ ಪರೀಕ್ಷೆಗೆ ಒಳಪಡಿಸಿದಾಗ ವಸ್ತು ಸಂಖ್ಯೆ 1 ,3,4 ರಲ್ಲಿ ರಕ್ತದ ಕಲೆಗಳು ಕಂಡುಬಂದಿದ್ದು , ಅವು ಮನುಷ್ಯನ ಒ ಗುಂಪಿಗೆ ಸೇರಿದ ರಕ್ತದ ಕಲೆಗಳಾಗಿದ್ದವು. ವಸ್ತು ಸಂಖ್ಯೆ 2 ರಲ್ಲಿ ಯಾವುದೇ ರಕ್ತದ ಕಲೆ ಇರಲಿಲ್ಲ. ವಸ್ತು ಸಂಖ್ಯೆ 5 ರಲ್ಲಿ ಇದ್ದ ಮಾದರಿ ರಕ್ತ ಹಾಳಾಗಿದ್ದು ಪರೀಕ್ಷೆಗೆ ಯೋಗ್ಯವಾಗಿರಲಿಲ್ಲ. ಆದ್ದರಿಂದ ಅದರ ಮೂಲ ಹಾಗೂ ಗುಂಪನ್ನು ಕಂಡು ಹಿಡಿಯಲು ಸಾಧ್ಯವಾಗಲಿಲ್ಲ. ಈಗ ನಾನು ನೋಡುತ್ತಿರುವ ಮು. ಮಾ. 3 , ಮು. ಮಾ. 4, ಮು. ಮಾ. 1, ಮು. ಮಾ. 2 ವುಗಳು ನಾನು ಪರೀಕ್ಷೆಮಾಡಿದ ವಸ್ತು ಸಂಖ್ಯೆ 1 ರಿಂದ 4 ಆಗಿವೆ. (ಸಾಕ್ಷಿಗೆ ಮಾದರಿ ರಕ್ತ ತೋರಿಸುವ ಸಲುವಾಗಿ ತೆರೆದ ನ್ಯಾಯಾಲಯದಲ್ಲಿ ಸೀಲ್ ಕವರ್ ನ್ನು ತೆಗೆಯಲಾಯಿತು.) ಈಗ ನಾನು ನೋಡುತ್ತಿರುವ ಸೀಲಾದ ಕವರ್ ಮಾದರಿ ರಕ್ತ ನಾನು ಮರಳಿ ಕಳಿಸಿದ್ದಾಗಿದ್ದು , ಅದನ್ನು ಮು. ಮಾ. 5 ಎಂದು ಗುರುತಿಸಲಾಯಿತು. ಮು. ಮಾ.1 ರಿಂದ 5 ರ ಮೇಲೆ ನಮ್ಮ ಕಚೇರಿಯ ಸೀಲ್ ಹಾಗೂ ನನ್ನ ಸಹಿ ಇರುವ ಚೀಟಿ ಅಂಟಿಸಲಾಗಿದೆ.

6. ಆ ಪ್ರಕಾರ ನಾನು ನನ್ನ ಅಭಿಪ್ರಾಯ ವರದಿ ಕೊಟ್ಟಿದ್ದು ಅದನ್ನು ಪೊಲೀಸರಿಗೆ ಕಳುಹಿಸಿ ಕೊಡಲಾಗಿದೆ. ವರದಿಯನ್ನು ನಿಪಿ.– 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ.– 12 (ಎ) ಎಂದು , ಮಾದರಿ ಸೀಲ್ ನ್ನು ನಿಪಿ. 13 , ಸಾಕ್ಷಿಯ ಸಹಿಯನ್ನು ನಿಪಿ 13 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಎಮ್ ಎನ್ ರವರಿಂದಃ**

7. ಈ ಪ್ರಕರಣಕ್ಕೆ ಸಂಬಂಧಿಸಿದ ವಸ್ತುಗಳನ್ನು ನಮ್ಮ ಕಚೇರಿಗೆ ತಂದು ಕೊಟ್ಟಾಗ ನಾವು

ಪೊಲೀಸರಿಗೆ ಸ್ವೀಕೃತಿ ಪತ್ರ ಕೊಟ್ಟಿರುತ್ತೇವೆ. ಆ ಸ್ವೀಕೃತ ಪತ್ರ ನನ್ನ ಹತ್ತಿರ ಇರುವುದಿಲ್ಲ. ನಮ್ಮ ಕಡೆಗೆ ಸ್ವೀಕೃತಿ ಇಲ್ಲದೆ ಇರುವುದರಿಂದ 5 ವಸ್ತುಗಳನ್ನು ಸ್ವೀಕರಿಸಿದ್ದೇವೆ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಮು. ಮಾ. 1 ಮಣ್ಣಿನ ಮೇಲೆ 3–4 ದಿನ ಬಿದ್ದಿದ್ದರೇ ಆ ಮಚ್ಚಿಗೆ ರಕ್ತದ ಕಲೆ ಆಗಿದ್ದರೆ ಮಣ್ಣಿನ ಕಣಗಳು ಅದರಲ್ಲಿ ಸೇರ್ಪಡೆ ಆಗುವ ಸಾಧ್ಯತೆ ಇದೆ. ನಾನು ನನ್ನ ಪರೀಕ್ಷೆಯ ಸಮಯದಲ್ಲಿ ಮು. ಮಾ. 1 ಕ್ಕೆ ಹತ್ತಿದ ರಕ್ತದ ಕಲೆಗಳಲ್ಲಿ ಮಣ್ಣಿನ ಕಣಗಳು ಇದ್ದವೋ ಇಲ್ಲವೋ ಎಂದು ನಾನು ಗಮನಿಸಿಲ್ಲ. ಮಣ್ಣಿನ ಕಣಗಳು ಇದ್ದರೇ ಸಾಮಾನ್ಯವಾಗಿ ಗಮನಕ್ಕೆ ಬರುತ್ತಿತ್ತು ಅಂದರೆ ನಾನು ರಕ್ತದ ಕಲೆಗಳ ಬಗ್ಗೆ ವಿಶ್ಲೇಷಣೆ ಮಾಡಿದ್ದರಿಂದ ಆ ಬಗ್ಗೆ ಗಮನಿಸಿಲ್ಲ.

8. ಮು. ಮಾ. 1 ನಮ್ಮ ಕಚೇರಿಗೆ ಕಳುಹಿಸಿ ಕೊಡುವಾಗಲೇ ಅದರ ಮೇಲೆ ಯಾವುದೇ ರಕ್ತದ ಕಲೆಗಳು ಇರಲಿಲ್ಲ ಎಂದರೆ ಸರಿಯಲ್ಲ. ಮು. ಮಾ. 5 ರಲ್ಲಿರುವ ರಕ್ತವನ್ನು ಮು. ಮಾ. 1 ಕ್ಕೆ ಹಾಕಿ ಕಲೆಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಮು. ಮಾ. 5 ನ್ನು ಪೊಲೀಸರು ಕಳುಹಿಸಿಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮನವಿಯ ಮೇರೆಗೆ ನಾನು ನಿಪಿ. 12 ರ ಪ್ರಕಾರ ರಕ್ತದ ಕಲೆಗಳು ಇದ್ದವು ಎಂದು ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

29.01.2024

(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.